ಮುಗ್ಧ ಮಗುವಿನಂತೆ ಪೋಸು ಕೊಟ್ಟಿರುವ ಈ ಸಲಗ ಯಾವಾಗ ಹೇಗೆ ವರ್ತಿಸುತ್ತದೆ ಎಂದು ಊಹಿಸುವುದು ಕಷ್ಟ. ಒಮ್ಮೊಮ್ಮೆ ಹೀಗೆ ಬದಲಾಗುವ ಇದರ ಚಿತ್ತ ಪ್ರವೃತ್ತಿಯ ಹಿಂದಿರುವ ರಹಸ್ಯ ಅರಿಯುವುದು ಕೂಡ ಅಷ್ಟೇ ಕಠಿಣ. ಮನುಷ್ಯರ ಕಂಡರೆ ಅದಕ್ಕಾಗುವ ಕಿರಿಕಿರಿ, ಅದರೊಳಗಿನ ಹಾರ್ಮೋನುಗಳ ಪಲ್ಲಟ, ಹೀಗೆ ಏನೇನೋ ತಿಳಿಯದ ನೂರು ಕಾರಣಗಳಿರಬಹುದು. ಆದರೆ ಕಾಡಿನ ಎಲ್ಲಾ ಗಂಡಾನೆಗಳು ಹೀಗಿರದೆ ಈ ಮಾವನ ಆನೆಯೊಂದೇ ಹೀಗೆ ಪುಡಿರೌಡಿ ತರಹ ಪುಂಡಾಟ ಮಾಡುತ್ತಿರುತ್ತದೆ.

ನಾನು ಸನ್ನಿ ಹಿಡಿದವನಂತೆ ಫೋಟೊ ತೆಗೆಯುವುದನ್ನು ನೋಡಿ ಅಚ್ಚರಿಗೊಂಡವರಲ್ಲಿ ಮಂಜೂ ಕೂಡ ಒಬ್ಬ. ನನ್ನಂತಹ ಅನೇಕ ಹುಚ್ಚರ ನೋಡಿರುವ ಅವನಿಗೂ ಫೋಟೊ ಕುತೂಹಲ ಸಹಜವಾಗೇ ಹೆಚ್ಚಾಯಿತು. ‘ಏನೋ ಸಾರ್, ನಾವು ದಿನಾ ನೋಡ್ತಾನೆ ಇರ್ತೀವಿ. ಅಷ್ಟೇನೂ ವಿಶೇಷ ಅನ್ನಿಸಲ್ಲ. ಅದೇ ನಿಮ್ಮ ಕ್ಯಾಮೆರಾದಲ್ಲಿ ನೋಡ್ದಾಗ ಎಲ್ಲಾನು ಎಷ್ಟು ಚೆಂದ ಚೆಂದ ಐತಲ್ಲ ಅನ್ನಗಾಂಗುತ್ತೆ’ ಎನ್ನುತ್ತಿದ್ದ.

ಅವನ ಸಂಬಳ ಕಡಿಮೆ ಇದ್ದರೂ, ಕಷ್ಟ ಹಾಸಿ ಹೊದಿಯುವಷ್ಟಿದ್ದರೂ ತಾನೊಂದು ಕ್ಯಾಮೆರಾ ಕೊಳ್ಳುವ ಆಸೆ ಅವನಲ್ಲಿ ಮೂಡಿತು. ಅದನ್ನೊಮ್ಮೆ ನನ್ನಲ್ಲಿ ತೋಡಿಕೊಂಡ. ಅವನ ಉತ್ಸಾಹಕ್ಕೆ ತಣ್ಣೀರೆರಚಲು ನನಗೂ ಮನಸ್ಸಿರಲಿಲ್ಲ. ಆದರೂ ಹೇಳಿದೆ. ‘ಮಂಜು ಫೋಟೊಗ್ರಫಿ ಉಳ್ಳವರ ಶೋಕಿ ಕಣಪ್ಪ. ಅದರ ಹಿಂದೆ ಬಿದ್ದು ನಾನಾಗಲೇ ಸಾಲಗಾರನಾಗಿದ್ದೇನೆ. ಇದೊಂದು ತರಹದ ಕೆಟ್ಟ ಜೂಜು. ಜೊತೆಗೆ ಸಖತ್ತು ದುಡ್ಡು ಖರ್ಚು ಮಾಡಿಸುವ ಜುಗಾರಿ. ಮತ್ತೊಮ್ಮೆ ಯೋಚಿಸು’ ಎಂದೆ. ಆದರವನು ಕ್ಯಾಮೆರಾ ಹೊಂದಲೇಬೇಕೆಂಬ ಕನಸಿಗೆ ಸರಿಯಾಗೇ ಜೋತು ಬಿದ್ದಿದ್ದ.

ಗೆಳೆಯರೆಲ್ಲಾ ಮಾತಾಡಿ ಅವನಿಂದಲೂ ಒಂದಿಷ್ಟು ದುಡ್ಡು ವಸೂಲು ಮಾಡಿ ಅವನ ಕೈಗೊಂದು ಕ್ಯಾಮೆರಾ ತಲುಪಿಸಿದೆವು. ದಿನಾ ಕಾಡಿನ ಪರಿಸರದಲ್ಲೇ ಅಲೆದಾಡುವ ಅವನೀಗ ಎಲ್ಲವನ್ನೂ ಚೆನ್ನಾಗಿ ಕಲಿತಿದ್ದಾನೆ. ಒಳ್ಳೆಯ ಪಟಗಳ ಕ್ಲಿಕ್ಕಿಸುತ್ತಿದ್ದಾನೆ. ಹೊಸ ಹೊಸ ಸಂಗತಿಗಳ ಕಂಡು ಹಿಡಿದು ಹೇಳಬಲ್ಲವನಾಗಿದ್ದಾನೆ. ಈ ಜಗತ್ತಿನಲ್ಲಿ ಎಲ್ಲವೂ ಹೀಗೆ ಆಗುವುದು. ಬೇಡವಾದವರ ಬಳಿ ಸಂಪತ್ತು ಕೊಳೆಯುತ್ತಾ ಬಿದ್ದಿರುತ್ತದೆ. ಪ್ರತಿಭೆ ಇರುವವರಿಗೆ ಹಣ, ಅವಕಾಶ ಮತ್ತು ಸೌಲಭ್ಯಗಳು ಎಂದಿಗೂ ಇರುವುದಿಲ್ಲ. ಈ ಮಿತಿಗಳ ಹೇಗಾದರೂ ದಾಟಿ ಬಂದು ತಮ್ಮೊಳಗಿನ ಚೈತನ್ಯವನ್ನು ಅನಾವರಣಗೊಳಿಸುವ ಶಕ್ತಿ ಮತ್ತು ಧೈರ್ಯ ಎಲ್ಲರಿಗೂ ಬರಬೇಕು. ಸುಖ ಮತ್ತು ಕನಸುಗಳಿರುವುದು ಬರೀ ಶ್ರೀಮಂತರಿಗಲ್ಲವಲ್ಲ!

ಒಂದು ದಿನ ಅವನು ತುಂಬಾ ಬೇಸರದಲ್ಲಿದ್ದ. ಮೇಲಾಗಿ ಹದಿನೈದು ದಿನದಿಂದ ನಾನವನ ನೋಡಲಾಗಿರಲಿಲ್ಲ. ಯಾಕೆಂದು ಕೇಳಿದೆ. ‘ಗಬ್ಬದ ಆನೆಯೊಂದು ಅನ್ಯಾಯವಾಗಿ ಸತ್ತೋತು ಸರ್’ ಎಂದು ಕಣ್ಣೀರು ಹಾಕಿದ. ‘ಹೆಂಗೋ’ ಎಂದೆ. ‘ಗಂಡಾನೆ ಜೊತೆ ಭಾರಿ ಜಗಳವಾಗಿರಬೇಕು ಸರ್. ಗಂಡಾನೆ ಸರಿಯಾಗಿ ತಿವಿದು ನೂಕಿ ಬಿಟ್ಟಿದೆ. ಮೋಟು ಮರದ ದೊಡ್ಡ ಬುಡ ಹೊಟ್ಟೆಗೆ ಚುಚ್ಚಿ ಒಳಗಿದ್ದ ಗಂಡು ಮರಿ ಸತ್ತೋಗಿದೆ. ನೋಡಿದ ಡಾಕ್ಟ್ರು ಹೇಳಿದ್ರು. ಇನ್ನೊಂದು ತಿಂಗಳು ಕಳೆದಿದ್ರೆ ಮರಿ ಭೂಮಿಗೆ ಬಂದಿರೋದು ಅಂದ್ರು. ಅದರ ಪೋಸ್ಟ್ ಮಾಟಂ ನೋಡಿ ಬಂದು ಅನ್ನ ತಿನ್ನಕಾಕ್ತಿಲ್ಲ ಸರ್’ ಎಂದು ಬೇಸರ ಸೂಚಿಸಿದ.

‘ಏನೂ ಮಾಡೋ ಹಂಗಿಲ್ಲ. ಪ್ರಕೃತಿ ನಿಯಮದಲ್ಲೇ ಈ ನಿರ್ದಯೆ ಇದೆ. ಇಂಥದ್ದನ್ನು ಅತ್ಯಂತ ಸಹಜ ಅಂತ ತಗೊಬೇಕಲ್ವೇನೋ?’ ಎಂದೆ. ‘ಯಾಕೋ ಎಳೆಮರಿ ಮೊಕ ನೋಡಿ ಹೊಟ್ಟೆ ಉರೀತು ಸರ್. ಅದೇ ವಿಚಿತ್ರ ನೋಡಿ, ಈ ಹುಲಿ–ಚಿರತೆಗಳು ಅಟ್ಯಾಕ್ ಮಾಡಿ ಚಿಂಕೆ, ಹಂದಿ, ಕಾಟಿಗಳ ಹೊಡೆದು ತಿನ್ನುವಾಗ ದುಃಖ ಆಗಲ್ಲ. ಬದಲಿಗೆ ಒಂಥರ ಖುಷಿ ಆಗುತ್ತೆ. ಅದೇ ಆನೆ ಸತ್ರೆ ವಿಪರೀತ ಬೇಜಾರಾಗುತ್ತೆ... ಯಾಕಿಂಗೆ ಸರ್... ಸಾವು ಅಂದಮೇಲೆ ಎಲ್ಲಾ ಒಂದೇ ಅಲ್ಲವಾ?’ ಎಂದು ಉಲ್ಟಾ ನನ್ನನ್ನೇ ಪ್ರಶ್ನಿಸಿದ. ‘ನಿನ್ನ ಮನಸ್ಸಿನಲ್ಲಿ ಆಗುವ ಎಲ್ಲಾ ಭಾವನೆಗಳಿಗೆ ನಾನು ಹೆಂಗಯ್ಯ ಉತ್ತರ ಹೇಳ್ಲಿ? ನೋಡು ಈ ಪ್ರಕೃತಿ ಹುಟ್ಟಿಗೂ ಸಂಭ್ರಮ ಪಡಲ್ಲ. ಸಾವಿಗೆ ಕಣ್ಣೀರೂ ಹಾಕಲ್ಲ. ಅದು ಮನುಷ್ಯರ ತರ ಅವಿವೇಕಿ ಅಲ್ಲ. ಸುಮ್ಮನೆ ಸೈಲೆಂಟಾಗಿ ಇದ್ದು ಬಿಡುತ್ತೆ. ಅಷ್ಟನ್ನು ನಾವೆಲ್ಲಾ ಕಲೀಬೇಕು’ ಎಂದು ಹೇಳಿದೆ. ‘ಏನೋ ಬಿಡಿ ಸರ್. ಎಲ್ಲಾ ವಿಚಿತ್ರ ದುನಿಯಾ’ ಎಂದು ಸುಮ್ಮನೆ ಕೂತ.

ಅಷ್ಟರಲ್ಲೇ ಕಾಡಿನೊಳಗೆ ಇಪ್ಪತ್ತು ವರುಷಗಳ ಜೀವನ ಕಳೆದ ಅನುಭವಸ್ಥ ಗೋವಿಂದರಾಜು ಬಂದರು. ತನ್ನ ಮಕ್ಕಳ ಜೊತೆ ಆಡುವ ಹುಲಿಯನ್ನು ಅತ್ಯಂತ ಸನಿಹದಿಂದ ಕಂಡ ಧೈರ್ಯಶಾಲಿ ಇವರು. ‘ಸರ್ ಉಸಿರು ಬಿಗಿ ಹಿಡ್ಕೊಂಡು ಒಂದು ಗಂಟೆ ಕಮಕ್ ಕಿಮಕ್ ಅನ್ನದಂಗೆ ಕಾದು ಕೂತಿದ್ದೆ ಸರ್. ಒಂಚೂರು ಶಬ್ದ ಆಗಿದ್ರೂ ನನ್ನ ಕಥೆ ಅವತ್ತೇ ಮುಗಿದಿತ್ತು. ತಾಯಿ ಹುಲಿ ಬರೇ ಇಪ್ಪತ್ತು ಅಡಿ ದೂರ. ನನ್ಕತೆ ಏನಾಗಿರಬಹುದು ನೀವೆ ಹೇಳಿ. ಅವತ್ತು ತಪ್ಪಿಸಿಕೊಂಡು ಬಂದಮೇಲೆ ಈಗ ಫುಲ್ ಜೋಶ್ ಬಂದಿದೆ’ ಎಂದು ನಕ್ಕರು. ಇವರ ಜೊತೆ ಹೀಗೆ ಮಾತಾಡುತ್ತಿದ್ದರೆ ಇಂಥವೇ ಅನೇಕ ರಮ್ಯ ಘಟನೆಗಳನ್ನು ಕೇಳಬಹುದು. ನಡುವೆ ಹೆಂಡತಿಯ ಕಾಯಿಲೆ, ಮಗನ ನಿರುದ್ಯೋಗ, ಹಣಕಾಸಿನ ಸಮಸ್ಯೆ, ಆರೋಗ್ಯದ ಏರುಪೇರು ಎಂಬ ಕಷ್ಟಗಳನ್ನೂ ಆಲಿಸಬಹುದು.

ಒಟ್ಟಾರೆ ಜೇಡರ ಬಲೆಯಂತೆ ಹೆಣೆದುಕೊಂಡಿರುವ ಈ ಕಾಡೊಳಗೆ ನಾವು ಕಾಣುವ ನೋಟವೇ ಅತ್ಯಂತ ಚಿಕ್ಕದು. ಕಾಣದ ದಾರಿಗಳು, ಕಾಡುವ ರಹಸ್ಯಗಳು, ಕೇಳಲಾಗದೆ ಉಳಿದುಕೊಂಡಿರುವ ಕಥೆಗಳಂತೂ ಸಾವಿರಾರು.

ಪ್ರತಿಕ್ರಿಯಿಸಿ: **feedback@sudha.co.in**

